ಅ) ಈ ಸಾಲವನ್ನು ಪಡೆದಿರುವ ಫಲಾನುಭವಿಗಳ ಹೆಸರು ವಿಳಾಸವನ್ನು ಒದಗಿಸುವುದು ?

ಇ) ಈ ಪೈಕಿ ಎಷ್ಟು ಜನರು ಕಳೆದ ಮೂರು ವರ್ಷಗಳಿಂದ ಸಾಲದ ಮರು ಪಾವತಿಯನ್ನು ಸಮಯಕ್ಕೆ ಸರಿಯಾಗಿ ಮಾಡಿಕೊಂಡು ಬರುತ್ತಿದ್ದಾರೆ.

ಈ) ಕಳೆದ ಮೂರು ವರ್ಷದ ಅವಧಿಯಲ್ಲಿ ಎಷ್ಟು ಜನರಿಗೆ ಅವರು ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡಲಾಗಿದೆ. ಇಲ್ಲವೆ ಬಡ್ಡಿ ರಿಯಾಯಿತಿ ನೀಡಲಾಗಿದೆಯೇ ? (ಹೆಸರು ವಿವರ ಹಾಗೂ ಮೊತ್ತವನ್ನು ನೀಡುವುದು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಈ ಬ್ಯಾಂಕು ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ರೂ. 50,000 ಕ್ಕೂ ಮೇಲ್ಪಟ್ಟು ಸಾಲವನ್ನು ವಿತರಿಸಿರುತ್ತೆ.

(ರೂ.ಲಕ್ಷಗಳಲ್ಲಿ)

ವರ್ಷ	ವಾಹನ ಸಾಲ		ವಿತರಿಸಲಾದ ಸಾಲ ಮನೆಕಟ್ಟಲು ಸಾಲ		ಸಣ್ಣ ಸಾಲ	ಕೈಗಾರಿಕೆ	ಒಟ್ಟು	
	ಸಂ.	ಮೊತ್ತ	ಸಂ.	ಮೊತ್ತ	ಸಂ.	ಮೊತ್ತ	ಸಂ.	ಮೊತ್ತ
1991-92	2	2.02	26	20.43	2	1.80	30	24.25
1992-93	-	-	30	23.55	-	-	30	23.55
1993-94	3	4.22	21	17.17	-	-	24	21.39
(ದಿನಾಂಕ : 01-04-1993 ರಿಂದ 31-12-1993ರವರೆಗೆ)								
ಒಟ್ಟು	5	6.24	77	61.15	2	1.80	84	69.19

ಆ) ಬ್ಯಾಂಕು ಮತ್ತು ಸದಸ್ಯರ ವ್ಯವಹಾರವು ವ್ಯಕ್ತಿಗತ ಮತ್ತು ಗುಪ್ತವಾಗಿರಬೇಕಾಗಿದ್ದು, ವೈಯಕ್ತಿಕ ಮಾಹಿತಿ ನೀಡುವುದು ಸಮಂಜಸವಾಗದು.

ಇ) 56 ಸಾಲಗಾರರು ತಮ್ಮ ಸಾಲದ ಕಂತುಗಳನ್ನು ಸರಿಯಾದ ಸಮಯಕ್ಕೆ ಪಾವತಿಸುತ್ತಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಬ್ಯಾಂಕ್ ಯಾವುದೇ ರೀತಿಯ ಅಸಲಾಗಲೀ ಅಥವಾ ಬಡ್ಡಿಯಾಗಲೀ ಮನ್ನಾ ಮಾಡಿರುವುದಿಲ್ಲ, ಹಾಗೂ ಯಾವುದೇ ರಿಯಾಯತಿ ನೀಡಿರುವುದಿಲ್ಲ.

ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಸಬ್‌ಮಾರ್ಕೆಟಿಂಗ್‌ಯಾರ್ಡ್.

125 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಸಬ್‌ಮಾರ್ಕೆಟಿಂಗ್‌ಯಾರ್ಡ್ ಪ್ರಾರಂಭಿಸಬೇಕೆಂದು ಮನವಿಗಳು ಸರ್ಕಾರಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಸರ್ಕಾರದವರು ಆ ಬಗ್ಗೆ ಯಾವ ಕ್ರಮ ಕೈಗೊಂಡಿರುವರು.

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು);

ಅ) ಹೌದು.

ಆ) ಈ ಬಗ್ಗೆ ಕೃಷಿ ಮಾರಾಟ ನಿರ್ದೇಶಕರಿಂದ ಬಂದಿರುವ ಸಮೀಕ್ಷಾ ವರದಿಯು, ಸರ್ಕಾರದ ಪರಿಶೀಲನೆಯಲ್ಲಿದೆ.